ಪ್ರಾರಂಭಿಸುವುದಕ್ಕೆ ಮೊದಲೇ ತೆಗೆದುಕೊಳ್ಳಬೇಕಾಗಿರುವುದಲ್ಲವೇ ? ಮೇಲ್ಕಂಡ ಯೋಜನೆಯಿನ್ವಯ ೨೪ ಜನತಾ ಶಿಕ್ಷಣ ನಿಯಮಗಳು ಮಂಜೂರಾಗಿದ್ದು, ನೇಮಕಾತಿ ಮಗ್ಗೆರೆ ಮಾಡಬೇಕಾಗಿಲ್ಲವೇ ? ಎರಡು ತಾಲ್ಲೂಕುಗಳ ಪರ್ಗಾವಣೆಯಿಂದ ಮೂರನೇ ತಾಲ್ಲೂಕಿನ ೯೦ ಕೇಂದ್ರಗಳು, ಹಾಗೂ ಜನತಾ ಶಿಕ್ಷಣ ನಿಲಯಗಳ ಪಾಡು ಏನು ?

ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ, ಹಾಗೂ ಈಗಾಗಲೇ ಪ್ರಾರಂಭವಾಗಿರುವ ೩೦೦ ಕೇಂದ್ರಗಳು ಈ ವರ್ಷ ಪೂರ್ಣ ಕೆಲಸ ಮಾಡಿ, ಉದ್ದೇಶ ಸಾಧಿಸುವುದು ಸೂಕ್ತವಲ್ಲವೇ ? ಈ ಬಗ್ಗೆ ವಿಷಧಿಕರಿಸಬೇಕೆಂದು ಪ್ರಾಥಮಿಕ ಶಿಕ್ಷಣ ಮಂತ್ರಿಗಳ ಗಮನವನ್ನು ಅಧ್ಯಕ್ಷರ ಮುಖೇನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾನು ಉತ್ತರವನ್ನು ತರಿಸಿ ಕೊಡುತ್ತೇನೆ.

(೫) ದ. ಕ. ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಬಿ ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಇದೀಗ ಮಳೆಗಾಲ ಪ್ರಾರಂಭವಾಗಿ ಜೂನ್ ೭, ೮, ೯, ಈ ಮೂರು ದಿವಸಗಳ ಭಾರಿ ತೂಫಾನು ಮತ್ತು ಮಳೆಯಿಂದಾಗಿ ಉಳ್ಳಾಲದ ಕಡಲ ತೀರದಲ್ಲಿ ಭಯಂಕರ ಕಡಲ್ಕೊರೆತವಾಗಿ ಭೀಕರವಾದಂಥ ಮತ್ತು ಅಪಾರವಾದಂಥ ಹಾನಿಯಾಗಿರುತ್ತದೆ. ಉಳ್ಳಾಲದ ಕೊಳಚಿಪುರ, ಸುಣ್ಣದ ಗೂಡಿನ ಕರಾವಳಿಯ ಕೆಡ್ಡುಗಳು, ಮನೆಗಳು ಸಂಪೂರ್ಣ ನೆಲಸಮವಾಗಿವೆ. ಯು. ಬಿ. ಇಸ್ಮಾಯಿಲ್, ಯು. ಎನ್. ಮೊಯಿಯುದ್ದೀನ್, ಖಾಲಿದ್, ಯು. ಪಿ. ಉಮರಬ್ಬ, ಯು. ಬಿ. ಹಸನಬ್ಬ, ಯು. ಕೆ. ಶರೀಫ್, ಯು. ಎನ್. ಬಾವ, ಎಂ. ಎ. ಖಾದರ್, ಇವರ ಕೆಡ್ಡುಗಳು ನೆಲಸಮವಾಗಿವೆ. ಖಾದರ್, ಅಮದ್ ಇವರ ಮನೆಗಳು ಕೊರೆತದಿಂದ ಬಿದ್ದಿವೆ. ಇಡ್ಡಿಯಬ್ಬ ನಡುಹಿತ್ತು, ಇಸುಬು, ಯು. ಚಿ. ಇಬ್ರಾಯಿ, ಅಬ್ದುಲ್ ರಹಿಮಾನ್ ಯು. ಕೆ. ಹಸನಬ್ಬ, ಇವರ ಕೆಡ್ಡುಗಳು ಬೀಳುವ ಸ್ಥಿತಿಯಲ್ಲಿ ಅಪಾಯದಲ್ಲಿವೆ, ಕಡಲು ಸಿಟ್ಟಿಗೆದ್ದು ಭೋರ್ಗರೆಯುತ್ತಿವೆ, ಗ್ಲಾಸುಸ್ಟೋನ್ ಬೋಲ್ಟ್ ರಚಿಸುವ ಕಾರ್ಖಾನೆಗೆ ನೀರನುಗ್ಗಿದೆ. ಅಲೇ ಕಡಲು ಸೀಳಾಗಿ ನೀರು ಒಳಪ್ರದೇಶಕ್ಕೆ ಹರಿಯುತ್ತಿದೆ. ಇನ್ನೂ ನಲವತ್ತಕ್ಕೂ ಮಿಕ್ಕಿದ ಮನೆಯವರು "ಅನೇಕ ಶೆಡ್ಡಿನವರು ಭಯ ಭೀತರಾಗಿದ್ದಾರೆ. ಉಳ್ಳಾಲಕ್ಕೆ ಕಡಲ್ಕೊರೆತದ ಸಲುವಾಗಿ ತಡೆಗೋಡೆ ಕಟ್ಟಿಸಬೇಕೆಂಬ ಕೆಲವು ವರ್ಷಗಳಿಂದ ಕೇಳುತ್ತಾ ಬಂದಿದ್ದರೂ, ಇನ್ನೂ ತಡೆಗೋಡೆ ಕಟ್ಟದೆ ಇದ್ದುದರಿಂದ ಭಯಾನಕ ಪರಿಸ್ಥಿತಿ" ಒದಗಿದೆ.

ಇಷ್ಟೆಲ್ಲಾ ಆಗಿದ್ದರೂ ಅಧಿಕಾರಿಗಳು, ಇಂಜಿನಿಯರ್‌ಗಳು ಇಲ್ಲಿಗೆ ಭೇಟಿ ನೀಡಿಲ್ಲ. ಇಲ್ಲಿನ ದಾರುಣ ಪರಿಸ್ಥಿತಿಯನ್ನು ಪರಿಶೀಲಿಸಿಲ್ಲ. ನಾನು ೧೨-೬-೧೯೮೮ರಂದು ಈ ಪ್ರದೇಶವನ್ನು ಭೇಟಿ ಮಾಡಿ ಎಲ್ಲಾ ಹಾನಿಯನ್ನು. ಅಲ್ಲಿನ ಭಯಗೊಂಡ ಜನರ ಭಯ ಭೀತಿಯನ್ನು ಕಣ್ಣಾರೆ ನೋಡಿ ಬಂದಿರುತ್ತೇನೆ.

ಆದ ಕಾರಣ ಸಂಬಂಧಿಸಿದ ಸಚಿವರು ಈ ಸ್ಥಳದ ಪರಿಶೀಲನೆ ಮಾಡುವುದು ಅತ್ಯಂ ಸೂಕ್ತ. ಅಧಿಕಾರಿಗಳು, ಇಂಜಿನಿಯರರೂ ಪರಿಶೀಲಿಸಿ ಪರಿಹಾರ ಕೊಡುವುದನ್ನು ನಿಗದಿಪಡಿಸಬೇಕಾಗಿದೆ. ಇದೀಗ ಜಿಲ್ಲೆಯ ಕರಾವಳಿಯಲ್ಲಿ ಅನೇಕ ಕಡೆ ಕಡಲ್ಕೊರೆತ ಆಗುತ್ತಲೇ ಇದೆ. ಈ ಮಳೆಗಾಲ ಮುಗಿಯುವಾಗ ಅಲ್ಲಿ ಸರ್ವವು ನಾಶವಾಗುವುದು. ಆದ್ದರಿಂದ ಉಳ್ಳಾಲಕ್ಕೆ ತಡೆಗೋಡೆ ಕಟ್ಟಿಸಿಕೊಡಬೇಕು. ಈಗ ಆಗಿರುವ ಹಾನಿಗೆ, ಹಾನಿಗೊಳಗಾದವರಿಗೆ ಪರಿಹಾರವನ್ನು ನೀಡುವಂತಾಗಬೇಕು. ಈ ಕುರಿತು ಮೀನುಗಾರಿಕೆ ಮತ್ತು ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

(೬) ದ. ಕ. ಜಿಲ್ಲೆಯಲ್ಲಿ ನ್ಯಾಯಾಲಯಂಗಳಿಗೆ ಸ್ಟೇಷನರಿ ಸಾಮಾಗ್ರಿಗಳನ್ನೊದಗಿಸದೆತೊಂದರೆಯಾಗಿರುವುದು

ಶ್ರೀ ವಿನಯ ಕುಮಾರ್ ಸೊರಕೆ. (ಪುತ್ತೂರು). —ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಾಲಯಂಗಳಿಗೆ ೧೯೮೪ನೇ ಇಸವಿಯಿಂದ ಅಗತ್ಯವುಳ್ಳ ಸ್ಟೇಷನರಿಗಳನ್ನು ಒದಗಿಸದೇ ತುಂಬ ತೊಂದರೆ ಆಗಿದೆ. ಪರಿಣಾಮವಾಗಿ, ಕಕ್ಷಿದಾರರಿಂದ, ಸಾರ್ವಜನಿಕರಿಂದ ಹಣ ಸಂಗ್ರಹಿಸಿ

ಕೋರ್ಟುಗಳಲ್ಲಿ ಸ್ಪೇಷನರಿ ಖರೀದಿಸಲಾಗುತ್ತಿದೆ ಎಂಬ ದೂರು ಇದೆ. ಈ ಸಲುವಾಗಿ ಸಂಬಂಧಪಟ್ಟವರ ಗಮನ ಪದೇ ಪದೇ ಸೆಳೆದರೂ ಪರಿಣಾಮ ಮಾತ್ರ ಶೂನ್ಯ. ಆದುದರಿಂದ ಅಗತ್ಯವುಳ್ಳ ಸ್ಪೇಷನರಿಯನ್ನು ಕೂಡಲೇ ಒದಗಿಸಬೇಕಾಗಿ ಕೋರಿಕೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೇ, ಇದು ಹೈಕೋರ್ಟಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಅರ್ಜಿಯ ಬಗ್ಗೆ ಅವರಲ್ಲಿ ಮನವಿ ಮಾಡಿಕೊಳ್ಳಬೇಕು ಎಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(೭) ಬೆಂಗಳೂರಿನ ರಾಬೇಹಳ್ಳಿಯಲ್ಲಿ ಮಾಜಿ ಸೈನಿಕರಿಗೆ ಕೊಟ್ಟ ನಿವೇಶನಗಳಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿರುವ ಬಗ್ಗೆ

ಶ್ರೀ ಎ. ಕೃಷ್ಣಪ್ಪ (ಪರ್ತೂರು).—ಮಾನ್ಯ ಅಧ್ಯಕ್ಷರೇ, ೧೯೭೭–೭೮ನೇ ಸಾಲಿನಲ್ಲಿ ಮಾಜಿ ಸೈನಿಕರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೃಷ್ಣರಾಜಪುರ ಹೋಬಳಿ ರಾಬೇನಹಳ್ಳಿ ಗ್ರಾಮದ ಸರ್ವೆ ನಂಬರ್ ೯೬ ಹಾಗೂ ೯೭ರಲ್ಲಿ ಸುಮಾರು ೫೭೮ ನಿವೇಶನಗಳನ್ನು ಹಂಚಲಾಗಿತ್ತು. ಆದರೆ ಸದರಿ ನಿವೇಶನಗಳಲ್ಲಿ ಖಾಸಗಿ ಜನರು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿದ್ದು ಮಾಜಿ ಯೋಧರು ಮನೆ ಕಟ್ಟಿಕೊಳ್ಳಲು ಅವಕಾಶವಿಲ್ಲವಾಗಿದೆ. ಈ ಬಗ್ಗೆ ಅವರು ಮಾಡಿದ ಪ್ರಯತ್ನ ವಿಫಲವಾಗಿದೆ. ಆದ್ದರಿಂದ ಅಲ್ಲಿ ಅಕ್ರಮವಾಗಿ ಹಾಗೂ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುವವರನ್ನು ಹೆದರಿಸಿ ಮಾಜಿ ಯೋಧರಿಗೆ ನೆರವು ಮಾಡಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೇ, ಇದು ನಗರಾಭಿವೃದ್ಧಿ ಮಂತ್ರಿಗಳಿಗೆ ಸಂಬಂಧಪಟ್ಟಿದ್ದಲ್ಲ. ಇದು ಬಿ. ಡಿ. ಎ. ಮಂತ್ರಿಗಳಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಅವರಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಈ ಹಿಂದೆ ಕರ್ನಾಟಕ ರಾಜ್ಯದಲ್ಲಿ ಅಂಗವಿಕಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸೀಟುಗಳನ್ನು ಕಾದಿರಿಸುವ ಕ್ರಮ ಇದ್ದಿತು. ಇತ್ತೀಚೆಗೆ ಅದನ್ನು ಕೈಬಿಡಲಾಗಿದೆ. ಇದರಿಂದ ಅಂಗವಿಕಲ ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಹೆಚ್ಚಿನ ಅವಕಾಶ ಸಿಗದೆ ವಂಚಿತರಾಗಿದ್ದಾರೆ. ಅಂಗವಿಕಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಒಂದಿಷ್ಟು ಸೀಟನ್ನು ಮೆಡಿಕಲ್ ಕಾಲೇಜುಗಳಲ್ಲಿ ಕಾದಿರಿಸಬೇಕು. ಅದರಲ್ಲಿಯೂ ಸಾಕಷ್ಟು ಅವಕಾಶಗಳಿಲ್ಲದ ಹಿಂದುಗಳು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ನೀಡಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಈಗ ಮೇಲ್ಮನೆಯಲ್ಲಿದ್ದಾರೆ. ಆದ್ದರಿಂದ ಅವರಿಗೆಹೇಳಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

(೮) ಬೈಲಹೊಂಗಲದಲ್ಲಿ ವಿ.ಎಲ್.ಐ. ಯವರನ್ನು (ಪಶುವೀಕ್ಷಕರು) ನೇಮಕ ಮಾಡುವ ಬಗ್ಗೆ

ಶ್ರೀ ಶಿವಾನಂದ ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೇ, ಬೆಳಗಾಂವ್ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹೈಕ ದೇವಲಾಪುರ ಗ್ರಾಮದಲ್ಲಿ ಎ.ಐ. ಯೂನಿಟ್, ಕೈ.ಗ.ಉ. ಕೇಂದ್ರ, ದೇವಲಾಪುರದಲ್ಲಿ ವಿ.ಎಲ್.ಐ. ಪೋಸ್ಟ್ ಎಷ್ಟೋ ದಿವಸಗಳಿಂದ ಖಾಲಿ ಇದ್ದು, ಇದರಿಂದ ರೈತರಿಗೆ ಅನ್ಯಾಯವಾಗುತ್ತಿದ್ದು, ಕೂಡಲೇ ಅಲ್ಲಿ ಒಬ್ಬ ವಿ.ಎಲ್.ಐ. ಇವರನ್ನು ನೇಮಕ ಮಾಡಬೇಕೆಂದ, ಅದೂ ಅಲ್ಲದೆ ವಿ.ಎಲ್.ಐ. ಪೋಸ್ಟ್‌ನ್ನು ಬಳ್ಳಾರಿಗೆ ಟ್ರಾನ್ಸ್‌ಫರ್ ಮಾಡಿರುವುದು ಅನ್ಯಾಯ, ಅತ್ಯಾಚಾರ ಆದಕಾರಣ ಕೂಡಲೇ ಮೊದಲು ಇದ್ದಂತೆ ದೇವಲಾಪುರದಲ್ಲಿ ಪೋಸ್ಟ್‌ನ್ನು ಇಟ್ಟು ಡಾಕ್ಟರನ್ನು ಪೋಸ್ಟಿಂಗ್ಸ್ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಮಹಮದ್ ಮೊಯಿನುದ್ದೀನ್.—ಸನ್ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೇವಲಾಪುರ ಗ್ರಾಮದ ಕೃತಕ ಗರ್ಭಧಾರಣಾ ಉಪ ಕೇಂದ್ರದ ಪಶು ಪರೀಕ್ಷಕರ ಹುದ್ದೆಯನ್ನು ಯೋಜನೆ ಮತ್ತು ಯೋಜನೇತರ ಹುದ್ದೆಗಳನ್ನು ಸರಿಹೊಂದಿಸುವ ಸಂದರ್ಭದಲ್ಲಿ ಎಂದರೆ ದಿನಾಂಕ 13-2-1984ರ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಎಫ್ 65 ಬಿಜಿಎಲ್ 84 ದಿನ್ನಯ ದಿನಾಂಕ 1-8-85ರಿಂದ ದೇವಲಾಪುರ ಗ್ರಾಮದ ಕೃತಕ ಗರ್ಭಧಾರಣ